*56* ನೇ ಅಪ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ನಗರ

ಎಸ್.ಸಿ.ಸಂಖ್ಯೆಃ ***830/2019***

ಸಿ.ಡಬ್ಲ್ಯೂ: **3** ಪಿ.ಡಬ್ಲ್ಯೂ: **3**

ಪ್ರಮಾಣ ವಚನ ಭೋದಿಸಲಾಯಿತು.
ದಿಃ08.09.2022

| | |
|---|---|
| ಹೆಸರು | ಶ್ರೀಮತಿ ರಮ್ಯ |
| ಗಂಡನ ಹೆಸರು | ಮಂಜುನಾಥ |
| ವಯಸ್ಸು | 30 ವರ್ಷ |
| ಕೆಲಸ | ಗೃಹಿಣಿ |
| ವಾಸ | ವೆಂಕಟಾಲ, ಬೆಂಗಳೂರು |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

**1.** ಚಾಸಾ-**1, 2, 8** ರಿಂದ **12** ರವರ ಪರಿಚಯವಿದೆ. **2018** ನೇಯ ಇಸವಿಯ ಒಂದು ದಿನ ಸಂಜೆ ನಮ್ಮ ಮನೆ ಹತ್ತಿರ ನಾನು ಬಟ್ಟೆ ತೊಳೆಯುವಾಗ ಚಾಸಾ-**9** ಮತ್ತು **10** ರವರು ಜಗಳ ಮಾಡಿಕೊಳ್ಳುತ್ತಿದ್ದರು. ನಾನು ಬಿಡಿಸಲು ಹೋದಾಗ ಚಾಸಾ-**1**-ರವರು ಅಲ್ಲಿಗೆ ಬಂದರು. ಆಗ ಆರೋಪಿ ಅಲ್ಲಿಗೆ ಬಂದು ಚಾಸಾ-**1** ರವರನ್ನು ತಳ್ಳಾಡಿ ಕೆಳಗಡೆ ಬೀಳಿಸಿದರು. ಆಗ ಆರೋಪಿ ಅವಾಚ್ಯ ಶಬ್ದಗಳಿಂದ ಬೈದರು. ಆಗ ಚಾಸಾ-**1** ರವರ ಗಂಡ ಚಾಸಾ-**2** ಸ್ಥಳಕ್ಕೆ ಬಂದಾಗ ಆರೋಪಿ ಮನೆಗೆ ಹೋಗಿ ಮಚ್ಚು ತೆಗೆದುಕೊಂಡು ಬಂದು ಚಾಸಾ-**2** ರವರ ಕಿವಿಗೆ ಮಚ್ಚಿನಿಂದ ಹೊಡೆದ. ಆಗ ಚಾಸಾ-**2** ಪ್ರಜ್ಞೆ ತಪ್ಪಿ ಕೆಳಗಡೆ ಬಿದ್ದರು. ಬಿಡಿಸಲು ಹೋದಾಗ ಆರೋಪಿ ನನ್ನ ಎಡಗೈಗೆ ಮಚ್ಚಿನಿಂದ ಹೊಡೆದು ಗಾಯಪಡಿಸಿದ. ನಾನು ನನ್ನ ಗಂಡ, ಚಾಸಾ-**1** ಮತ್ತು **2** ಆಸ್ಪತ್ರೆಗೆ ಹೋದೆವು. ನನ್ನ ಕೈಗೆ **4** ಹೊಲಿಗೆ ಹಾಕಿರುತ್ತಾರೆ. ಚಾಸಾ-**2** ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದು ನಂತರ ಅಪೂರ್ವ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ದಾಖಲಾಗಿ ಒಳರೋಗಿಯಾಗಿ ಒಂದು

ತಿಂಗಳು ಚಿಕಿತ್ಸೆ ಪಡೆದಿರುತ್ತಾರೆ. ಚಾಸಾ-2 ರವರಿಗೆ ಕಿವಿಯಿಂದ ಕೆನ್ನೆಯವರೆಗೂ ಗಾಯವಾಗಿತ್ತು. ಚಾಸಾ-1 ದೂರು ನೀಡಿರುತ್ತಾರೆ. ನಂತರ ಪೋಲೀಸರು ನನ್ನ ಹೇಳಿಕೆ ಪಡೆದಿರುತ್ತಾರೆ.

2. ಆರೋಪಿತ ನನಗೆ ಮತ್ತು ಚಾಸಾ-2 ರವರಿಗೆ ಉಪಯೋಗಿಸಿದ ಮಚ್ಚನ್ನು ನ್ಯಾಯಾಲಯದಲ್ಲಿ ನೋಡಿದರೆ ಗುರುತಿಸುತ್ತೇನೆ. ಮಚ್ಚನ್ನು ಈಗಾಗಲೇ ಮುಮಾ-3 ಎಂದು ಗುರುತಿಸಲಾಗಿದೆ.

3. ಸಾಕ್ಷಿ ಆರೋಪಿತನನ್ನು ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತಾರೆ.

ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎ.ವಿ.ಆರ್. ರವರಿಂದಃ

4. ಚಾಸಾ-1 ಮತ್ತು 2 ರವರು ನಮ್ಮ ಅಕ್ಕಪಕ್ಕದ ಮನೆಯವರು ಎಂದರೆ ಸರಿ. ಚಾಸಾ-1, 2, 4 ರಿಂದ 12 ರವರು ಒಂದೇ ಬಡಾವಣೆಯ ವಾಸಿಗಳು ಎಂದರೆ ಸರಿ. ಚಾಸಾ-8-ಮಂಜುನಾಥ ನನ್ನ ಗಂಡ ಎಂದರೆ ಸರಿ. ನಾನು ಬಟ್ಟೆ ಒಗೆಯುವಾಗ ಚಾಸಾ-9 ಮತ್ತು 10 ರವರು ಮದ್ಯಪಾನ ಮಾಡಿ ಆಗಾಗ ಜಗಳ ಮಾಡಿಕೊಳ್ಳುತ್ತಾರೆ ಎಂದರೆ ಸರಿ. ಚಾಸಾ-9 ರವರಿಗೆ ಚಾಸಾ-1 ಸೊಸೆ ಎಂದರೆ ಸರಿ. ಚಾಸಾ-2 ರವರು ಚಾಸಾ-10 ರವರಿಗೆ ಭಾಮೈದ ಎಂದರೆ ಸರಿ.

5. ಚಾಸಾ-9 ಮತ್ತು 10 ರವರು ಯಾವ ವಿಚಾರಕ್ಕೆ ಜಗಳ ಮಾಡಿಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ. ಜಗಳ ಸಮಯದಲ್ಲಿ ಸಾಕಷ್ಟು ಜನ ಸೇರಿದ್ದರು ಎಂದರೆ ಸರಿ. ನಾನು ಮತ್ತು ಆರೋಪಿ ಜಗಳ ಬಿಡಿಸಲು ಹೋಗಿದ್ದೆವು ಎಂದರೆ ಸರಿ. ಆರೋಪಿ ನನಗೆ ಮಚ್ಚಿನಿಂದ ಹೊಡೆದಿಲ್ಲ ಎಂದರೆ ಸರಿಯಲ್ಲ. ಗಲಾಟೆಯ ಸಮಯದಲ್ಲಿ ನಾನು ಕೆಳಗೆ ಬಿದ್ದು ಪೆಟ್ಟು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಕೈಗೆ

ಮಚ್ಚಿನಿಂದ ಹೊಡೆದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರ ಶಬ್ದ ಕೇಳಿ ಚಾಸಾ-2 ರವರು ಸ್ಥಳಕ್ಕೆ ಬಂದರು ಎಂದರೆ ಸರಿ. ಚಾಸಾ-2 ರವರಿಗೆ ಕೆಳಗೆ ಬಿದ್ದು ತಲೆಗೆ ಪೆಟ್ಟಾಯಿತು ಎಂದರೆ ಸರಿಯಲ್ಲ. ಆರೋಪಿಯು ಮಚ್ಚಿನಿಂದ ನನ್ನ ಕೈಗೆ ಮತ್ತು ಚಾಸಾ-2 ರವರ ಕಿವಿಗೆ ಹೊಡೆದು ಗಾಯಪಡಿಸಿಲ್ಲ ಎಂದರೆ ಸರಿಯಲ್ಲ. ನಾವು ಮೊದಲು ಸರ್ಕಾರಿ ಆಸ್ಪತ್ರೆಗೆ ಹೋಗಿದ್ದು, ಅಲ್ಲಿ ವೈದ್ಯರಿಲ್ಲದ ಕಾರಣ ಚಾಸಾ-2 ರವರನ್ನು ಅಪೂರ್ವ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಆರೋಪಿಯು ನನಗೆ ಮಚ್ಚಿನಿಂದ ಹೊಡೆಯದೇ ಇದ್ದರೂ ಸಹ ಚಾಸಾ-1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ಮಚ್ಚಿನಿಂದ ಚಾಸಾ-2 ರವರ ಕಿವಿಗೆ ಹೊಡೆದು ತೀವ್ರ ಗಾಯಪಡಿಸಿಲ್ಲ ಎಂದರೆ ಸರಿಯಲ್ಲ. ಗಲಾಟೆಯಲ್ಲಿ ಚಾಸಾ-2 ರವರು ಕೆಳಗೆ ಬಿದ್ದು, ತಲೆಗೆ ಪೆಟ್ಟು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪಿರ್ಯಾದುದಾರರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ಸಾಕ್ಷಿಯ ಸಾಕ್ಷ್ಯವನ್ನು ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸ ಇ.

(ಟಿ.ಗೋವಿಂದಯ್ಯ)
56ನೇ ಅಪರ ಸಿಟಿ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು.